ಸುಮನಾ, ತೆಲಂಗಾಣ
ಪ್ರಪಂಚದಲ್ಲಿ ಹಣವೇ ಇಲ್ಲದಿದ್ದರೆ ಏನಾಗುತ್ತಿತ್ತು?



ಕಲಿಯುಗವೂ ಕೃತಯುಗದಂತೆಯೇ ಇರುತ್ತಿತ್ತು.

ಪಿ. ಶಂಕರಪ್ಪ, ಶಿವಮೊಗ್ಗ
ಇಂದಿನ ವ್ಯವಸ್ಥೆಗೆ ನಾವೇ ಕಾರಣ ಎಂದು ನನ್ನ ಅಭಿಮತ. ನೀವೇನಂತೀರಿ?
ನಾನಲ್ಲಪ್ಪ!

ಕೆ. ಗೋವಿಂದಾಚಾರಿ, ಮೈಸೂರು
ದ್ವಿಚಕ್ರವಾಹನದಲ್ಲಿ ಇಬ್ಬರಿಗಿಂತ ಜಾಸ್ತಿ ಇರುತ್ತಾರೆ. ದೊಡ್ಡ ಕಾರುಗಳಲ್ಲಿ ಒಬ್ಬರೇ ಚಲಿಸುತ್ತಾರೆ. ಏಕೆ?
ಸಿರಿ ಹೆಚ್ಚಿದಷ್ಟೂ ಮನುಷ್ಯ ಒಂಟಿಯಾಗುತ್ತಾನೆಂದು ಸೂಚಿಸಲು.

ಮಧುರ ಸುಬ್ರಹ್ಮಣ್ಯ, ಬೆಂಗಳೂರು
ಮಾಡೋದು ಅನಾಚಾರ ತಿನ್ನೋದು ಬದನೆಕಾಯಿ ಎಂದರೆ ಬದನೆ ತಿನ್ನುವವರು ಅನಾಚಾರಿಗಳೆಂದು ಅರ್ಥವೆ?



ಹುಟ್ಟೋದು ಸೂರ್ಯ ಕೂಗೋದು ಕೋಳಿ ಎಂದರೆ ಕೋಳಿ ಕೂಗಿದಾಗಲೆಲ್ಲ ಸೂರ್ಯ ಹುಟ್ಟುತ್ತಾನೆಂದಲ್ಲ.

ವಿ. ಹಮೀದ್, ವಿಟ್ಲ
ಬೆಳಕು ನೀನು, ಕಿರಣ ನಾನು ಅಂತಾಳೆ. ಏಕೆ?
'ನೀನು ಎಗ್ಗಾಮಗ್ಗಾ ಧಡಿಯ; ನಾನು ಸ್ಲಿಮ್ಮು' ಎನ್ನುತ್ತಿದ್ದಾಳೆ.

ಸುಮಾ ರಮೇಶ್, ಹಾಸನ
ನಮ್ಮ ಜನರಲ್ಲಿ ಮಾಸ್ಕ್ ಹಾಕಿಕೊಂಡರೂ ಕಂಡವರ ವಿಷಯದಲ್ಲಿ ಮೂಗು ತೂರಿಸುವ ಚಾಳಿ ಹೋಗಿಲ್ಲವಲ್ಲ?
ಅಚ್ಚರಿಯೇನದರೊಳ್? ನಾಯಿಯ ಬಾಲಕ್ಕೆ ರೇಷ್ಮೆ ಶಾಲು ಸುತ್ತಿದರೂ ಡೊಂಕು ಡೊಂಕೇ.

ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣನ್ನು ಜಾರಿದವಳು ಎನ್ನುವುದಾದರೆ ಗಂಡಸ್ನು?
ಜಾರೋಬಂಡೆ.

ಗಂಗಾಚಾರಿ, ಬೆಂಗಳೂರು
ಉತ್ತರವಿಲ್ಲದ ಪ್ರಶ್ನೆ ಯಾವುದು ಗುರುಗಳೆ?
ಕೇಳಿಲ್ಲದ, ಕೇಳಲಾಗದ ಪ್ರಶ್ನೆ.

ರಾಜೀವ್ ಮಾಗಲ್, ಸಕಲೇಶಪುರ
ಇಂಟರ್‌ನೆಟ್ ಬರುವುದಕ್ಕೆ ಮುಂಚೆ 'ಕೊರೊನಾ ಲಾಕ್ಡೌನ್' ಬಂದಿದ್ದರೆ ಜನಗಳ ಗತಿ ಏನಾಗುತ್ತಿತ್ತು?
ವರ್ಕ್ ಫ್ರಂ ಹೋಂ ಇಲ್ಲದೆ ಒಟ್ಟುಕುಟುಂಬಗಳು ಕಷ್ಟದಲ್ಲೂ ನೆಮ್ಮದಿಯಿಂದಿರುತ್ತಿದ್ದವು.

ಹೆಚ್.ವಿ. ರಂಗನಾಥ, ಬೆಂಗಳೂರು
ದೇಶದಲ್ಲಿ ಒಂದಲ್ಲ ಒಂದು ದಂಧೆ ನಡೆಯುತ್ತಿರುವಾಗ ಅಭಿವೃದ್ಧಿ ಸಾಧ್ಯವೇ?
ಒಂದಲ್ಲ ಒಂದು ದಂಧೆಯ ಅಭಿವೃದ್ಧಿ ಸಾಧ್ಯ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಚಿನ್ನ ದುಬಾರಿಯಾಗಿದೆ. ಹಾಗಾದರೆ ಬಡವರು ತಾಳಿಗೆ ಏನು ಮಾಡಬೇಕು?
ವಿಮೆ.

ಕೆ. ಸಿದ್ದಪ್ಪ, ಬೆಂಗಳೂರು
ನಾಯಿಬಾಲಕ್ಕೂ ಮನುಷ್ಯನ ನಡವಳಿಕೆಗೂ ಏನು ವ್ಯತ್ಯಾಸ?
ನಾಯಿಬಾಲವನ್ನು ಒಮ್ಮೆ ತುಂಡರಿಸಿದರೆ ಮತ್ತೆ ಬೆಳೆಯುವುದಿಲ್ಲ.

ಎಸ್.ಎನ್. ಮಹಾಬಲರಾವ್, ಎನ್ನಾರ್‍ಪುರ
ವಿಧವೆ ಬೇಕು, ವಿವಾಹ ಬೇಕಿಲ್ಲ?
ಮರುವಿಧವೆ ಆಗುವುದು ಬೇಡವೆಂದು!

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಹೋಟೆಲ್‌ನಲ್ಲಿ ಹಳಸಿದ ತಿನಿಸುಗಳಿದ್ದರೂ ಬಿಸಿ ತಾಜಾ ತಿನಿಸು ಸಿಗುತ್ತೆ ಎಂದು ಫಲಕ ಹಾಕಿರುತ್ತಾರೆ?
ಬಿಸಿ ಎಂದರೆ ಬಿಫೋರ್ ಕ್ರೈಸ್ತ್ ನಷ್ಟು ಹಳೆಯದು; 'ತಾಜಾ' ಪದವು 'ತ್ಯಾಜ್ಯ'ದ ವಿರೂಪ.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ
ಕನ್ನಡಿಯ ಮುಂದೆ ನಿಂತ ಯುವತಿಗೂ, ಮೈಕಿನ ಮುಂದೆ ನಿಂತ ಸಾಹಿತಿಗೂ ಇರುವ ವ್ಯತ್ಯಾಸವೇನು?
ಯುವತಿಗೆ ತಿದ್ದಿಕೊಳ್ಳುವ ಆಸಕ್ತಿ ಇರುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಸಂಗೀತಕ್ಕೆ ತಾಳ. ಸಂಸಾರಕ್ಕೆ?
ಗಟ್ಟಿಮೇಳ, ಗಟ್ಟಿ ಮೂಳ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನನ್ನ ಪ್ರಶ್ನೆ ಬಹುಮಾನಿತ ಪ್ರಶ್ನೆಯಾಗಿ ಬರುವುದು ಯಾವಾಗ ರಾಮ್ ಶೆಟ್ರೆ?
ಅಂತಹ ಲಕ್ಷಣಗಳಿವೆ ಎಂದು ಡಯಾಗ್ನೋಸ್ ಆದ ತಕ್ಷಣ ಡಾಕ್ಟ್ರೇ.

ಮಹಾವೀರ ಕಾಸರ, ಶಿವಮೊಗ್ಗ
ಸಪ್ತಪದಿ (ಹೆಜ್ಜೆ) ಎಂಬುದು ಸಪ್ತಸುತ್ತು ಎಂದಾಗಬೇಕಲ್ಲವೆ?



ಆ ಮಧುರ ಕ್ಷಣಗಳಲ್ಲಿ ವಧುವರರಿಗೆ ಪ್ರತಿ ಸುತ್ತೂ ಒಂದು ಹೆಜ್ಜೆಯಂತೆ ಅನಿಸುವುದರಿಂದ ಪದಿಯೇ ಸರಿ.

ಗಣಪತಿ ಕಂಚಿಪಾಲ, ಯಲ್ಲಾಪುರ
ರಾಮರಾಜ್ಯಕ್ಕೂ, ರಾವಣರಾಜ್ಯಕ್ಕೂ ಇರುವ ವ್ಯತ್ಯಾಸ?
ರಾವಣರಾಜ್ಯ ರಣ ರಂಗ; ರಾಮರಾಜ್ಯ ತೋರಣ ರಂಗ.

ಫಾಲನೇತ್ರ ಸಜ್ಜನ, ಶಿರಸಿ
ಜಗತ್ತಿನೆದುರು ಒಂಟಿಯಾಗಿರುವ ಚೀನಾ ಅದಾವ ಧೈರ್ಯದಿಂದ ವಿರೋಧ ಸಾಧಿಸುತ್ತಿದೆ?
ಜನಬಲ ಇದೆಯಲ್ಲ! ಗೆದ್ದರೆ ಗೆಲುವಿನ ನೆಮ್ಮದಿ; ಸೋತರೆ ಜನಸಂಖ್ಯೆ ಕಡಿಮೆಯಾದ ನೆಮ್ಮದಿ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in